870 ಶ್ರೀ ಮಾಲಿಕಯ್ಯ ವೆಂಕಯ್ಯ ಗುತ್ತೇದಾರ್ (ಅಫ್ಜಲ್‌ಪುರ್) : ಮಾನ್ಯ ಲೋಕೋಪಯೋಗಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ವಿಶ್ವ ಯೋಜನೆ ಅಡಿಯಲ್ಲಿ ಮಂಜೂರಾಗಿರುವ ಗುಲ್ಬರ್ಗಾ ಹೊಸೂರು ರಸ್ತೆ ಕಾಮಗಾರಿ ಪ್ರಾರಂಭಿಸಲು ವಿಳಂಬವಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ಕಾಮಗಾರಿ ಪ್ರಾರಂಭಿಸುವುದಕ್ಕೆ ಇರುವ ಅಡಚಣೆಗಳನ್ನು ನಿವಾರಿಸಲು ಸರ್ಕಾರ ಯಾವ ಕ್ರಮಗಳನ್ನು ಕೈಗೊಂಡಿದೆ;

ಇ) ಈ ರಸ್ತೆಯ ಕಾಮಗಾರಿಯನ್ನು ಯಾವಾಗ ಪ್ರಾರಂಭ ಮಾಡಿ ಮುಗಿಸಲಾಗುತ್ತದೆ?

ಶ್ರೀ ಸಿ.ಎಂ.ಉದಾಸಿ (ಲೋಕೋಪಯೋಗಿ ಸಚಿವರು) :

ಅ) ಗುಲ್ಬರ್ಗಾದಿಂದ ಹೊಸೂರುವರೆಗಿನ 99 ಕಿಮೀ, ರಸ್ತೆ ಅಭಿವೃದ್ಧಿಯನ್ನು ಕೆಶಿಪ್–2ರ ಅಡಿಯಲ್ಲಿ ಕೈಗೊಳ್ಳಲಾಗುತ್ತಿದ್ದು, ಯೋಜನೆಯ ಮೊದಲ ಹಂತದಲ್ಲಿ ಗುಲ್ಬರ್ಗಾದಿಂದ ಚೌಡಾಪುರವರೆಗಿನ 29 ಕಿ.ಮೀ.ಗಳ ರಸ್ತೆಯ ಅಭಿವೃದ್ಧಿಯನ್ನು ವಿಶ್ವಬ್ಯಾಂಕ್‌ನ ಆರ್ಥಿಕ ನೆರವಿನಲ್ಲಿ ಕೈಗೊಳ್ಳಲು ಯೋಜಿಸಲಾಗಿದೆ. ಈ ಕಾಮಗಾರಿಯ ಗುತ್ತಿಗೆ ದಸ್ತಾವೇಜುಗಳಿಗೆ ವಿಶ್ವಬ್ಯಾಂಕ್‌ನ ಅನುಮೋದನೆ ನಿರೀಕ್ಷಿಸಲಾಗಿದೆ.

ಆ) ಪ್ರಶ್ನೆ ಉದ್ಭವಿಸುವುದಿಲ್ಲ.

ಇ) ವಿಶ್ವಬ್ಯಾಂಕ್‌ನಿಂದ ಅನುಮೋದನೆ ದೊರೆತ ಮೇಲೆ ಗುತ್ತಿಗೆ ಕರೆದು ತದನಂತರ ಕಾಮಗಾರಿಯನ್ನು ಪ್ರಾರಂಭಿಸಲಾಗುವುದು. ಹಾಗೂ ಈ ರಸ್ತೆಯ ಚೌಡಾಪುರದಿಂದ ಹೊಸೂರು ವರೆಗಿನ ರಸ್ತೆಯ ಅಭಿವೃದ್ಧಿಯನ್ನು ಯೋಜನೆಯ ಮುಂದಿನ ಹಂತಗಳಲ್ಲಿ ಆರ್ಥಿಕ ಲಭ್ಯತೆಯ ಅನುಗುಣವಾಗಿ ಕೈಗೊಳ್ಳಲು ಯೋಜಿಸಲಾಗಿದೆ.

1098 ಶ್ರೀ ಕಿಮ್ಮನೆ ರತ್ನಾಕರ್ : ಮಾನ್ಯ ಗೃಹ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ತೀರ್ಥಹಳ್ಳಿ ತಾಲ್ಲೂಕು ಬಿದರಗೋಡಿನಲ್ಲಿ ನಕ್ಸಲರ ಹಲ್ಲೆ ಮತ್ತು ಬೆಂಕಿ ಪ್ರಕರಣದಲ್ಲಿ ಹತ್ತಾರು ಲಕ್ಷ ರೂ.ಗಳನ್ನು ಕಳೆದುಕೊಂಡ ಅರುಣಕುಮಾರ್ ಮತ್ತು ಕಿರಣಕುಮಾರ್ ಕುಟುಂಬಕ್ಕೆ ಗೃಹ ಇಲಾಖೆ ಅಥವಾ ಸರ್ಕಾರ ಯಾವುದಾದರೂ ಪರಿಹಾರ ನೀಡಿದೆಯೇ; ಇಲ್ಲದಿದ್ದಲ್ಲಿ ಕಾರಣವೇನು;